ಪರಿವೀಕ್ಷಣಾಧಿಕಾರಿಯವರಿಂದ ವಿಚಾರಣಾ ವರದಿಯನ್ನು ಪಡೆಯಲಾಗಿದ್ದು, ಯಾವುದೇ ಅವ್ಯವಹಾರ/ ಸಾಮೂಹಿಕ ನಕಲು ಪ್ರಕರಣಗಳು ಕಂಡು ಬಂದಿರುವುದಿಲ್ಲವೆಂದು ವರದಿ ನೀಡಿರುತ್ತಾರೆ.

(ಆ) ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಭೂಮಾಪಕರ ಕೊರತೆ

58 (55) ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ) :- ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

(ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಾಗೇಪಲ್ಲಿ ಹಾಗೂ ಗುಡಿಬಂಡೆ ತಾಲ್ಲೂಕುಗಳಲ್ಲಿ ಭೂಮಾಪಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಆ ಕೊರತೆ ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು) :-

(ಅ) ಬಂದಿದೆ

(ಆ) ಹೊಸದಾಗಿ ನೇಮಕಗೊಂಡು ವೃತ್ತಿ ಬುನಾದಿ ತರಬೇತಿ ಪೂರ್ಣಗೊಳಿಸಿರುವ 1613 ಭೂಮಾಪಕ ಶಿಕ್ಷಣಾರ್ಥಿಗಳನ್ನು ಸೇವಾ ನಿರತ ತರಬೇತಿಗಾಗಿ ವಿವಿಧ ತಾಲ್ಲೂಕು ಕಛೇರಿಗಳಿಗೆ ನಿಯೋಜಿಸಲಾಗಿದೆ. ಸದರಿ ತರಬೇತಿಯು ಜುಲೈ 2014ರ ಅಂತ್ಯಕ್ಕೆ ಪೂರ್ಣಗೊಳ್ಳಲಿದ್ದು. ತರಬೇತಿ ಪೂರ್ಣಗೊಂಡ ನಂತರ ಹುದ್ದೆಗಳನ್ನು ಹಂಚಿಕೆ ಮಾಡಿ, ಭೂಮಾಪಕರುಗಳನ್ನು ನೇಮಿಸಲಾಗುವುದು.

ಆಮ್ ಆದ್ಮಿ ಭೀಮಾ ಯೋಜನೆಯ ಅನುಷ್ಠಾನ

59 (99) ಶ್ರೀ ಸುಧಾಕರ ಲಾಲ್ ಪಿ.ಆರ್. (ಕೊರಟಗೆರೆ) :- ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

(ಅ) ರಾಜ್ಯದಲ್ಲಿ ಆಮ್ ಆದ್ಮಿ ಭೀಮಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೇ ; ಹಾಗಿದ್ದಲ್ಲಿ, ಈ ಯೋಜನೆ ಬಗ್ಗೆ ಜನಸಾಮಾನ್ಯರಿಗೆ ಯಾವ ರೀತಿ ಪ್ರಚಾರ ಮಾಡಿ ಮಾಹಿತಿ ನೀಡಲಾಗುತ್ತಿದೆ ;

(ಆ) ಹಾಗಿದ್ದಲ್ಲಿ, ಈ ಭೀಮಾ ಯೋಜನೆಯು ಯಾವ ದಿನಾಂಕದಿಂದ ಜಾರಿಗೆ ಬಂದಿದೆ ; ಈ ಭೀಮಾ ಯೋಜನೆಯಡಿ ಯಾವ ಯಾವ ಸೌಲಭ್ಯಗಳು ದೊರೆಯುತ್ತದೆ ;

(ಇ) ಈ ಭೀಮಾ ಯೋಜನೆಯ ಫಲಾನುಭವಿಗಳಾಗಲು ಇರುವ ಮಾನದಂಡಗಳೇನು ;

(ಈ) ಕಾರ್ಮಿಕ ಇಲಾಖೆಯ ಜನಶ್ರೀ ಭೀಮಾ ಯೋಜನೆಯನ್ನು ಈ ಯೋಜನೆಯಡಿ ವಿಲೀನಗೊಳಿಸಲಾಗಿದೆಯೇ ; ಹಾಗಿದ್ದಲ್ಲಿ, ವಿಲೀನಗೊಳಿಸಲು ಕಾರಣಗಳೇನು ; ವಿಲೀನಗೊಳಿಸಿದ್ದರಿಂದ ಜನಸಾಮಾನ್ಯರಿಗೆ ಆಗುವ ಅನುಕೂಲಗಳೇನು ; (ವಿವರ ಹಾಗೂ ವಿಲೀನಗೊಳಿಸಿದ ಆದೇಶದ ಪ್ರತಿಗಳನ್ನು ನೀಡುವುದು)

(ಉ) ಕೊರಟಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯಡಿ ನೋಂದಾಯಿಸಿಕೊಂಡವರ ಸಂಖ್ಯೆ ಎಷ್ಟು ; ಅದರಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ ಹಾಗೂ ಎಷ್ಟು ಫಲಾನುಭವಿಗಳಿಗೆ ಈ ಸೌಲಭ್ಯವನ್ನು ಒದಗಿಸಲಾಗಿದೆ ? (ವಿವರ ನೀಡುವುದು)

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು) :–

(ಅ) ರಾಜ್ಯದಲ್ಲಿ ಆಮ್ ಆದ್ಮಿ ಭೀಮಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

ಆಮ್ ಆದ್ಮಿ ಭೀಮಾ ಯೋಜನೆಯಡಿ ವಿಮಾ ಸೌಲಭ್ಯ ಪಡೆಯುವ ಬಗ್ಗೆ ಸಾರ್ವಜನಿಕರಿಗೆ ಸೂಕ್ತ ತಿಳುವಳಿಕೆ ನೀಡುವುದು ಅವಶ್ಯಕವಿರುವುದರಿಂದ, ವಿಮಾ ಸೌಲಭ್ಯವನ್ನು ಪಡೆಯುವುದರ ಬಗ್ಗೆ ವಿವರಗಳನ್ನು ತಾಲ್ಲೂಕು ಕಛೇರಿಗಳಲ್ಲಿ ಶಾಶ್ವತ ಫಲಕಗಳನ್ನು ಬರೆಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪ್ರದರ್ಶಿಸಲು ಹಾಗೂ ವಿಮಾ ಸೌಲಭ್ಯದ ಬಗ್ಗೆ ಸಾಕಷ್ಟು ಪ್ರಚಾರ ನೀಡಲು ರಾಜ್ಯದ ಎಲ್ಲಾ ತಾಲ್ಲೂಕು ತಹಶೀಲ್ದಾರರುಗಳಿಗೆ ಸೂಕ್ತ ನಿರ್ದೇಶನವನ್ನು ನೀಡಲಾಗಿದೆ. ಅಲ್ಲದೇ, ಸದರಿ ಯೋಜನೆಯಡಿ ಸೌಲಭ್ಯವನ್ನು ಪಡೆಯಲು ವಿವಿಧ ಕಸುಬುದಾರರ ಸಂಘ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಯೋಜನೆಯ ಬಗ್ಗೆ ಮಾಹಿತಿಗಳನ್ನು ನೀಡಿ ಪ್ರಚಾರ ಕೈಗೊಳ್ಳಲಾಗುತ್ತಿದೆ.

(ಆ) ಆಮ್ ಆದ್ಮಿ ಭೀಮಾ ಯೋಜನೆಯು ದಿನಾಂಕ : 01–07–2008 ರಿಂದ ಜಾರಿಗೆ ಬಂದಿದೆ. ಸರ್ಕಾರದ ಆದೇಶ ಸಂ. ಆರ್‌ಡಿ 52 ಡಿಎಸ್‌ಪಿ 2012, ದಿನಾಂಕ : 18–7–2013 ರಂತೆ ಕಾರ್ಮಿಕ ಇಲಾಖೆಯ ಜನಶ್ರೀ ಭೀಮಾ ಯೋಜನೆಯನ್ನು ಕಂದಾಯ ಇಲಾಖೆಯ ಆಮ್ ಆದ್ಮಿ ಭೀಮಾ ಯೋಜನೆಯೊಂದಿಗೆ ವಿಲೀನಗೊಳಿಸಿ ಜಾರಿಗೊಳಿಸಲಾಗಿದೆ.

ಸದರಿ ಯೋಜನೆಯ ಸೌಲಭ್ಯಗಳು ಈ ಕೆಳಕಂಡಂತಿದೆ :

1. ನೈಸರ್ಗಿಕ ಸಾವು : ರೂ. 30.000/–
2. ಆಕಸ್ಮಿಕ ಸಾವು : ರೂ. 75,000/–
3. ಪೂರ್ಣ ಅಂಗವಿಕಲತೆ : ರೂ. 75,000/–
4. ಭಾಗಶಃ ಅಂಗವಿಕಲತೆ ರೂ. 37,500/–

5. 9ನೇ ತರಗತಿ ಯಿಂದ 12ನೇ ತರಗತಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ರೂ. 1200/– ಗಳ ವಿದ್ಯಾರ್ಥಿ ವೇತನ (ಎರಡು ಮಕ್ಕಳಿಗೆ ಸೀಮಿತ)

(ಇ) ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಭೂ ರಹಿತ ಕುಟುಂಬಗಳ ಜೊತೆಗೆ ಕಾರ್ಮಿಕ ಇಲಾಖೆಯ ಜನಶ್ರೀ ಭೀಮಾ ಯೋಜನೆಯ 72 ವಿವಿಧ ಕಸುಬುಗಳನ್ನು ಮಾಡುತ್ತಿರುವ ಕಸುಬುದಾರರು 18 ರಿಂದ 59 ವರ್ಷದೊಳಗಿನ ಕುಟುಂಬದ ಮುಖ್ಯಸ್ಥರು/ಮುಖ್ಯ ಪೋಷಕರು ಆಮ್ ಆದ್ಮಿ ಭೀಮಾ ಯೋಜನೆಯಡಿ ಫಲಾನುಭಗಳಾಗಲು ಅರ್ಹರಿರುತ್ತಾರೆ.

(ಈ) ಸರ್ಕಾರದ ಆದೇಶ ಸಂ. ಆರ್.ಡಿ 52 ಡಿಎಸ್‌ಪಿ 2012, ದಿನಾಂಕ : 18–7–2013 ರಂತ ಕಾರ್ಮಿಕ ಇಲಾಖೆಯ ಜನಶ್ರೀ ಭೀಮಾ ಯೋಜನೆಯನ್ನು ಕಂದಾಯ ಇಲಾಖೆಯ ಆಮ್ ಆದ್ಮಿ ಭೀಮಾ ಯೋಜನೆಯೊಂದಿಗೆ ವಿಲೀನಗೊಳಿಸಲಾಗಿದೆ.

ಜನಶ್ರೀ ಭೀಮಾ ಯೋಜನೆ ಹಾಗೂ ಆಮ್ ಆದ್ಮಿ ಭೀಮಾ ಯೋಜನೆಯ ಸ್ವರೂಪ ಹಾಗೂ ಗುಣಲಕ್ಷಣಗಳು ಒಂದೇ ರೀತಿಯಾದುದರಿಂದ, ಎರಡೂ ಯೋಜನೆಗಳನ್ನು ವಿಲೀನಗೊಳಿಸಿ "ಆಮ್ ಆದ್ಮಿ ಭೀಮಾ ಯೋಜನೆ" ಎಂದು ಮರು ನಾಮೀಕರಿಸಲು ಭಾರತ ಸರ್ಕಾರ ತೀರ್ಮಾನಿಸಿದ ಹಿನ್ನೆಲೆಯಲ್ಲಿ ಸಚಿವ ಸಂಪುಟದಲ್ಲಿ ವಿಷಯವನ್ನು ಮಂಡಿಸಿ ವಿಲೀನಗೊಳಿಸಲಾಗಿರುತ್ತದೆ.

ಈ ಮೊದಲು ಗ್ರಾಮೀಣ ಭೂ ರಹಿತ ಕುಟುಂಬಗಳಿಗೆ ಮಾತ್ರ ಆಮ್ ಆದ್ಮಿ ಭೀಮಾ ಯೋಜನೆಯಡಿ ಸೌಲಭ್ಯ ಕಲ್ಪಿಸಲಾಗಿದ್ದು, ಪ್ರಸ್ತುತ ಜನಶ್ರೀ ಭೀಮಾ ಯೋಜನೆಯನ್ನು ವಿಲೀನಗೊಳಿಸಿರುವುದರಿಂದ 72 ವಿವಿಧ ಕಸುಬುದಾರರ ಕುಟುಂಬಗಳಿಗೂ ವಿಮಾ ಯೋಜನೆಯ ಸೌಲಭ್ಯವನ್ನು ಕಲ್ಪಿಸಲಾಗಿದೆ. (ಸರ್ಕಾರದ ಆದೇಶದ ಪ್ರತಿಯನ್ನು ಲಗತ್ತಿಸಿದೆ)

(ಉ) ಕೊರಟಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯಡಿ ಒಟ್ಟು 2321 ಫಲಾನುಭವಿಗಳು ನೋಂದಾಯಿಸಿ ಗುರುತಿಸಲಾಗಿದೆ. ಈ ಪೈಕಿ ಮೇ–2014ರ ಅಂತ್ಯಕ್ಕೆ ಇಬ್ಬರು ಫಲಾನುಭವಿಗಳು ಕ್ಲೇಮ್ ಸೌಲಭ್ಯವನ್ನು ಪಡೆದಿರುತ್ತಾರೆ.

ಕ್ರೀಡಾ ತರಬೇತುದಾರರ ಕೊರತೆ ಮತ್ತು ಕ್ರೀಡಾಪಟುಗಳ ಸಮರ್ಪಕ ಬಳಕೆ

61 (102) ಶ್ರೀ ಸುಧಾಕರ ಲಾಲ್ ಪಿ.ಆರ್. (ಕೊರಟಗೆರೆ) :– ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ರಾಜ್ಯದಲ್ಲಿ ತಾಲ್ಲೂಕು ಹಂತದಲ್ಲಿ ಕ್ರೀಡಾ ತರಬೇತುದಾರರಿಲ್ಲದೇ ಕ್ರೀಡಾಪಟುಗಳಿಗೆ ಕ್ರೀಡೆಗಳ ಬಗ್ಗೆ ಸರಿಯಾಗಿ ಮಾರ್ಗದರ್ಶನ ಸಿಗದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;